**Karnataka State Rural Development and Panchayat Raj University, Gadag**
**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವ ವಿದ್ಯಾಲಯ ಗದಗ**
&
**Karnataka State Souharda Federal Co-operative Ltd. Bengaluru**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು**

No. RDPRU 37 ACA 2022 Date: 12-01-2023

# 2022-23 ನೇ ಸಾಲಿಗೆ ಪ್ರವೇಶ ಅಧಿಸೂಚನೆ

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 05.01.2023**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಇವರುಗಳ ಸಹಯೋಗದಲ್ಲಿ 2022–23 ನೇ ಸಾಲಿಗೆ ಒಂದು ವರ್ಷದ "ಡಿಪ್ಲೊಮಾ ಸಹಕಾರ ಹಾಗೂ ಬ್ಯಾಂಕಿಂಗ್ ನಿರ್ವಹಣೆ" ಪ್ರೋಗ್ರಾಮ್‌ಗೆ ಅರ್ಹ ಅಭ್ಯರ್ಥಿಗಳಿಂದ ಹಾಗೂ ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಂದ ಸಮುಚಿತ ಮಾರ್ಗದ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದೆ.

**ಡಿಪ್ಲೊಮಾ ಪ್ರೋಗ್ರಾಮ್‌ನ ವಿವರ:**

| | |
|---|---|
| ಪ್ರೋಗ್ರಾಮ್‌ನ ಶೀರ್ಷಿಕೆ | ಸಹಕಾರ ಹಾಗೂ ಬ್ಯಾಂಕಿಂಗ್ ನಿರ್ವಹಣೆ ಡಿಪ್ಲೋಮಾ |
| ಪ್ರೋಗ್ರಾಮ್‌ನ ಅವಧಿ | ಒಂದು ವರ್ಷ (1) |
| ಸೆಮಿಸ್ಟರಗಳ ಸಂಖ್ಯೆ | ಎರಡು (2) |
| ಬೋಧನಾ ವಿಧಾನ | ವಾರಾಂತ್ಯದ ಆನ್‌ಲೈನ್ ಹಾಗೂ ಸಂಪರ್ಕ ತರಗತಿಗಳು |
| **ಅರ್ಹತೆ** | |
| ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು | ಪಿ.ಯು.ಸಿ ಪಾಸ ಅಥವಾ ಎಸ್.ಎಸ್.ಎಲ್.ಸಿ ಉತ್ತೀರ್ಣತೆಯ ಜೊತೆಗೆ ಸಹಕಾರಿ ಸಂಸ್ಥೆಗಳಲಿ ಕನಿಷ್ಠ 3 (ಮೂರು) ವರ್ಷಗಳ ಸೇವಾನುಭವ ಹೊಂದಿರಬೇಕು |
| ಸಾಮಾನ್ಯ ಯುವಕರಿಗೆ | 12 ನೇ ತರಗತಿ / ಪಿ.ಯು.ಸಿ ಉತ್ತೀರ್ಣ |
| ಅರ್ಜಿ ಹಾಗೂ ಪ್ರೋಗ್ರಾಮ್ ಶುಲ್ಕ | ರೂ.8,600=00 |

**ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

- ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯ ಹಾಗೂ ಕ.ರಾ.ಸೌ.ಸಂ.ಸ.ಲಿ.ನ ವೆಬ್ ಸೈಟ್ www.ksrdpru.ac.in www.souharda.coop ನಲ್ಲಿ ನೋಡಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು.
- ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಅರ್ಜಿ ಹಾಗೂ ಪ್ರೋಗ್ರಾಮ್ ಫೀ ರೂ.8600/- (ಅರ್ಜಿ ಶುಲ್ಕ ರೂ.100/- ಹಾಗೂ ಪ್ರೋಗ್ರಾಮ್ ಶುಲ್ಕ 8500/-) **"ಹಣಕಾಸು ಅಧಿಕಾರಿಗಳು, ಕೆ.ಎಸ್.ಆರ್.ಡಿ.ಪಿ.ಆರ್.ಯು. ಡಿಪ್ಲೋಮಾ ಇನ್ ಕೋ–ಆಪರೇಟಿವ ಆಂಡ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ಗದಗ,"** ಇವರ ಹೆಸರಿಗೆ ಡಿ.ಡಿ. ಪಡೆದು, ಡಿ.ಡಿ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರು, ಹಾಗೂ ಮೊಬೈಲ್ ನಂ. ನಮೂದಿಸಿ, ಭರ್ತಿ ಮಾಡಿ ಅಥವಾ **ಅರ್ಜಿ ಶುಲ್ಕವನ್ನು ಆನ್–ಲೈನ್‌ಲ್ಲಿ ಸಹ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ SB Account Number: 110095611771, Canara Bank, IFSC Code: CNRB0000511** ಗೆ, NEFT / RTGS / UPI ಮುಖಾಂತರ ಪಾವತಿಸಿ, Transaction ID Screen Shot Print-Out ಪಡೆದು **"ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055."** ಇವರಿಗೆ ಸೂಕ್ತ ದಾಖಲೆಗಳು ಹಾಗೂ ಸಂದಾಯ ಮಾಡಿದ ಮೂಲ ಶುಲ್ಕದ ರಸೀದಿ / Transaction ID Screen Shot Print-Out ನ 2 ಪ್ರತಿಗಳನ್ನು

ಲಗತ್ತಿಸಿ, ಖುದ್ದಾಗಿ / ತ್ವರಿತ ಅಂಚೆ / ಕೋರಿಯರ್ ಮೂಲಕ ದಿನಾಂಕ **30.01.2023** ರ ಒಳಗಾಗಿ ಸಲ್ಲಿಸುವುದು.

- ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು "ಸೇವಾ ಪ್ರಮಾಣ ಪತ್ರ" ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
- ಅಪೂರ್ಣ ಅರ್ಜಿಗಳಿದ್ದಲ್ಲಿ (ಪೂರಕ ದಾಖಲೆಗಳು ಇಲ್ಲದ ಪ್ರಕರಣಗಳಿದ್ದಲ್ಲಿ) ಯಾವುದೇ ಮುನ್ಸೂಚನೆ ನೀಡದೇ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಮಹತ್ವದ ದಿನಗಳು**

| | | |
|---|---|---|
| ಅ) | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 30.01.2023 |
| ಆ) | ತಾತ್ಕಾಲಿಕ ಜೇಷ್ಠತಾಪಟ್ಟಿ ಪ್ರಕಟಿಸುವ ದಿನಾಂಕ | 04.02.2023 |
| ಉ) | ಪ್ರಥಮ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕ | ಫೆಬ್ರುವರಿ ತಿಂಗಳ ಎರಡನೇ ವಾರ 2023 |

- ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಪ್ರವೇಶಾತಿ ಸಯೋಜಕರನ್ನು ಸಂಪರ್ಕಿಸಬಹುದಾಗಿದೆ:

  - **ಡಾ. ಅಭಯಕುಮಾರ್ ಗಸ್ತಿ**

  ಎಂ.ಕಾಂ. ಪ್ರೋಗ್ರಾಮ್ ಸಂಯೋಜಕರು,
  ಕ.ರಾ.ಗ್ರಾ. ಮತ್ತು ಪಂ.ರಾ.ವಿಶ್ವವಿದ್ಯಾಲಯ, ಗದಗ
  ಮೊಬೈಲ್ ಸಂಖ್ಯೆ: 9844456930

  - **ಶ್ರೀ. ವಿ.ಜೆ. ಕಾರ್‌ಕೂನ್**

  ತರಬೇತಿ ಸಂಯೋಜಕರು,
  ಕ.ರಾ.ಸೌ.ಸಂ.ಸ.ಲಿ. ಬೆಂಗಳೂರು,
  ಮೊಬೈಲ್ ಸಂಖ್ಯೆ: 8884466710

**ಪ್ರವೇಶಾತಿ ಮಾಹಿತಿ ಕೇಂದ್ರ –** 6360269205/9632062466

ಆದೇಶದ ಮೇರೆಗೆ

**ಕುಲಸಚಿವರು**
**ಪ್ರೊ. ಡಾ॥ ಬಸವರಾಜ ಎಲ್. ಲಕ್ಕಣ್ಣವರ**

**ಪ್ರತಿಗಳು:** ಆಪ್ತ ಸಹಾಯಕರು ಕುಲಪತಿಗಳು / ಕುಲಸಚಿವರು / ವಿತ್ತಾಧಿಕಾರಿಗಳು / ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಸೌ.ಸಂ.ಸ.ಲಿ. / ಪರೀಕ್ಷಾ ವಿಭಾಗ / ಸೂಚನಾ ಫಲಕ / ಕಛೇರಿ ಕಡತ.